ಹುಮ್ನಾಬಾದ್ : 104

ಒಟ್ಟು : 742

ಸದರಿ 79 ಶಾಲೆಗಳಲ್ಲಿ 8 ಸರ್ಕಾರಿ ಪ್ರೌಢಶಾಲೆಗಳಿಗೆ ಸರ್ಕಾರದಿಂದ ಅಂಗೀಕೃತ ಆದೇಶ ನೀಡಿ ಬಂದಿರುವುದಿಲ್ಲ ಬಾಕಿ 3 ಶಾಲೆಗಳಿಗೆ ಸರ್ಕಾರದಿಂದ ತಿರಸ್ಕೃತವಾಗಿದ್ದು ಅವುಗಳನ್ನು ಜಿಲ್ಲಾ ಪರಿಷತ್ತಿನವರು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ತಿಳಿಸಿ ನಡೆಸಲು ಅನುಮತಿ ನೀಡಿದ್ದು ಈಗ ಒಟ್ಟು 79 ಸರ್ಕಾರಿ ಪ್ರೌಢಶಾಲೆಗಳು ಸಹ ಕರ್ತವ್ಯ ನಿರ್ವಿಹಿಸುತ್ತಿರುತ್ತದೆ.

ಆ) ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಉಪಾಧ್ಯಾಯರ ಸಂಖ್ಯೆ:578.ಬೀದರ್ ಜಿಲ್ಲೆಗಳಿಗೆ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ : 3085.

ಇ) ಇಲ್ಲಾ. ಬೀದರ್ ಜಿಲ್ಲೆಯಲ್ಲಿ 1:50 ರ ಉಪಾಧ್ಯಾಯರ ಮಕ್ಕಳ ಅನುಪಾತದಂತೆ ಜಿಲ್ಲೆಗೆ 190 ಪ್ರಾಥಮಿಕ ಶಾಲೆ ಶಿಕ್ಷಕರ ಅವಶ್ಯಕತೆಯಿದ್ದು, ಈಗಾಗಲೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ..

ಈ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಉಪಾಧ್ಯಾಯರ ಸಂಖ್ಯೆ:88,

ಬೀದರ್ ತಾ : 13	ಬೀದರ್ ತಾ :08
ಬಿ. ಕಲ್ಯಾಣ :16	ಬಸವ ಕಲ್ಯಾಣ :30
ಬಾಲ್ಕಿ ತಾ :18	ಬಾಲ್ಕಿ :19
ಔರಾದ್ :19	ಔರಾದ್ :23
ಹುಮ್ನಾಬಾದ್ : 22	ಹುಮ್ನಾಬಾದ್ :18
	ಒಟ್ಟು :108

ಉ) ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ತುಂಬಲು ಶೇಕಡ 40 ಮಿತವ್ಯಯ (ಸ್ಟೈಪಂಡರಿ) ಪದವೀಧರರಿಂದ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಬಾಕಿ ಉಳಿದಿರುವ ಹುದ್ದೆಗಳನ್ನು ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದು ಇದಾದನಂತರ ಸದರಿ ಹುದ್ದೆಗಳನ್ನು ತುಂಬಲಾಗುವುದು.

ಬೈಲಹೊಂಗಲ ನೇಸರಗಿ ಪದವಿ ಪೂರ್ವ ಕಾಲೇಜು

3282 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಪದವಿ ಪೂರ್ವ ಕಾಲೇಜು ಎಂದು ಪ್ರಾರಂಭಿಸಲಾಯಿತು?*

ಆ) *ಈ ಕಾಲೇಜು ಪ್ರಾರಂಭವಾದ ನಂತರ ಇಲ್ಲಿಯವರೆಗೆ ಎಷ್ಟು ಡೆಸ್ಕ್‌ಗಳನ್ನು ಹಾಗೂ ಪೀಠೋಪಕರಣಗಳನ್ನು ಒದಗಿಸಲಾಗಿದೆ?*

ಇ) *ಡೆಸ್ಕ್‌ಗಳನ್ನು ಕೊರತೆಯಿಂದ ಹಾಗೂ ಪೀಠೋಪಕರಣಗಳ ಕೊರತೆಯಿಂದ ಈ ವರ್ಷ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದನ್ನು ನಿಲ್ಲಿಸಲಾಗಿದೆಯೆ?*

ಈ) [illegible] ಡೆಸ್ಕ್‌ಗಳನ್ನು ಒದಗಿಸಲು

ಉ) ವಿದ್ಯಾರ್ಥಿಗಳಿಗೆ ಓದುವ ಸಲುವಾಗಿ ಇಲ್ಲಿಯವರೆಗೆ ಎಷ್ಟು ರೂಪಾಯಿ ಲೈಬ್ರರಿ ಪುಸ್ತಕ ಒದಗಿಸಲಾಗಿದೆ?

ಊ) ಒಂದು ವೇಳೆ ಲೈಬ್ರರಿ ಪುಸ್ತಕಗಳು ಪೂರೈಸದೇ ಇದ್ದಲ್ಲಿ ಕೂಡಲೇ ಪುಸ್ತಕಗಳನ್ನು ಪೂರೈಸಲು ಕ್ರಮವನ್ನು ಕೈಗೊಳ್ಳಲಾಗಿದೆಯೇ?

ಋ) ಈ ಕಾಲೇಜಿನಲ್ಲಿ ಎಷ್ಟು ಜನ ನೌಕರಿಯವರು ಒಂದು ವೇಳೆ ನೌಕರರ ಕೊರತೆಯಿದ್ದಲ್ಲಿ ಅದನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವರೇ? ಹಾಗೂ ಎಷ್ಟು ದಿವಸಗಳಲ್ಲಿ ಈ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) 1984-85

ಆ) ಒದಗಿಸಿಲ್ಲ.

ಇ) ಇಲ್ಲ.

ಈ) ಬೇಡಿಕೆ ಬಂದಾಗ ಪರಿಶೀಲಿಸಲಾಗುವುದು.

ಉ) ಒದಗಿಸಲಾಗಿರುವುದಿಲ್ಲ.

ಋ) ಸದರಿ ಕಾಲೇಜಿನಲ್ಲಿ ಹಾಲಿ 8 ಜನ ಬೋಧನ ವರ್ಗ, ಒಬ್ಬ ಗುಮಾಸ್ತ ಮತ್ತು ಒಬ್ಬ ಜವಾನ ಇದ್ದಾರೆ. ನೌಕರರ ಕೊರತೆ ಇರುವುದಿಲ್ಲ.

ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ ಸೈನ್ಸ್ ವಿಭಾಗದ ಅವಶ್ಯಕತೆ

3450 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿ ಸೈನ್ಸ್ ವಿಭಾಗವ ಆವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಯೂನಿವರ್ಸಿಟಿ ಅಫಿಲಿಯೇಷನ್ ಸಲುವಾಗಿ ಯೂನಿವರ್ಸಿಟಿಗೆ ಹಣ ತುಂಬಲು ಯಾವ ಕ್ರಮ ಕೈಗೊಂಡಿದೆ.

ಇ) ಅಲ್ಲಿ ಕಾಲೇಜನ್ನು ಸ್ಥಾಪಿಸಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಬಂದಿದೆ.

ಆ) 1992-93ನೇ ಸಾಲಿನಿಂದ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಇದಕ್ಕಾಗಿ ಅರ್ಜಿಯೊಂದಿಗೆ ಸಂಯೋಜನಾ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಕಟ್ಟಬೇಕೆಂದು ಸದರಿ ಕಾಲೇಜಿನ ಪ್ರಿನ್ಸಿಪಾಲರನ್ನು ಕೋರಲಾಗಿದೆ.

ಇ) ಈಗಾಗಲೇ ಅಲ್ಲಿ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ಸ್ಥಾಪಿಸಲಾಗಿದೆ. ವಿಶ್ವ ವಿದ್ಯಾನಿಲಯದ ಶಿಫಾರಸ್ಸಿನ ಮೇರೆಗೆ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲಾಗುವುದು.